# Sixth Semester B.A. Degree Examination, April/May 2019

*(CBCS – Semester Scheme)*

## ಐಚ್ಛಿಕ ಕನ್ನಡ

## Paper VII – ಸಂಶೋಧನೆ, ಬಹುಶಿಸ್ತೀಯ ಅಧ್ಯಯನ ಮತ್ತು ಜಾನಪದ ಸ್ವರೂಪ

*Time : 3 Hours]* *[Max. Marks : 90*

ಭಾಗ–೧ : ಸಂಶೋಧನೆ

I. (ಅ) **ಒಂದು** ಭಾಗದ ಮಹತ್ವವನ್ನು ವಿವರಿಸಿ : **(1 × 5 = 5)**

1. 'ಸಂಶೋಧನೆ' ಎನ್ನುವುದು ಹೆಸರೇ ಸೂಚಿಸುವಂತೆ ಅನ್ವೇಷಣ ರೂಪದ ಬೌದ್ಧಿಕ ಕ್ರಿಯೆಯಾಗಿದೆ. ಮಾನವನ ಸಾಮಾನ್ಯ ಪ್ರವೃತ್ತಿಯಾಗಿರುವ ಇದು ಇಪ್ಪತ್ತನೆಯ ಶತಮಾನದ ಮಾನವನ ಅಸಾಮಾನ್ಯ ಲಕ್ಷಣವಾಗಿದೆ. ಕಲೆ, ವಿಜ್ಞಾನ, ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಹಳೆಯದರ ಅನ್ವೇಷಣೆ ಹೊಸದರ ಆವಿಷ್ಕರಣ ಕಾರ್ಯಗಳು ಇಂದು ವ್ಯಕ್ತಿ ಮತ್ತು ಸಂಸ್ಥೆಗಳ ಮಟ್ಟದಲ್ಲಿ ಜಗತ್ತಿನಾದ್ಯಂತ ಸ್ಪರ್ಧಾತ್ಮಕ ರೀತಿಯಿಂದ ಮುನ್ನೆಡೆದಿವೆ.

2. ಅಧ್ಯಯನ ಅಥವಾ ಸಂಶೋಧನೆ ಒಬ್ಬ ವ್ಯಕ್ತಿ ಅಥವಾ ಒಂದು ವಿದ್ವಾಂಸರ ವಲಯದಿಂದ ನಡೆದು ಪ್ರಕಟಗೊಂಡಿರಬಹುದು. ಆದರೆ ಅದರಲ್ಲಿ ಸಾಮಾಜಿಕ ಸಂದರ್ಭವೊಂದರ ಪರೋಕ್ಷ ಪಾಲುದಾರಿಕೆ ಇದೆ ಎಂಬ ಅಂಶವನ್ನು ನಾವು ಗಮನದಲ್ಲಿಟ್ಟಿರಬೇಕು. ಇದು ನಮ್ಮದೇ ಸಾಧನೆಯಲ್ಲ. ಆ ಸನ್ನಿವೇಶ ಏರ್ಪಡಿಸಿದ ಒತ್ತಡಗಳನ್ನು ನಾವು ಆವಾಹಿಸಿಕೊಂಡು ನಮ್ಮ ಮೂಲಕವಾಗಿ ಅದು ವ್ಯಕ್ತಗೊಂಡಿತೇ ಹೊರತು ಇದು ವ್ಯಕ್ತಿಗಳ ಸಾಧನೆ ಮಾತ್ರವಲ್ಲ.

(ಆ) **ಎರಡರ** ಪ್ರಸ್ತುತತೆಯನ್ನು ತಿಳಿಸಿ : **(2 × 3 = 6)**

1. ಸಂಶೋಧಕನ ಪ್ರಥಮ ಅರ್ಹತೆ ಕುತೂಹಲ.
2. ಅರಿತವನಿಗಿಂತ ನುರಿತವ ಶ್ರೇಷ್ಠ.
3. ಸಂಶೋಧನೆ ಇಂದು ಯಂತ್ರಗಳನ್ನು ಅವಲಂಬಿಸಿ ಹೆಜ್ಜೆ ಹಾಕುವುದು ಅನಿವಾರ್ಯವಾಗಿದೆ.
4. ಸಮಸ್ಯೆ ಸಂಶೋಧನೆಯ ಉದ್ದೇಶವನ್ನು ನಿರ್ಧರಿಸುತ್ತದೆ.

(ಇ) **ಒಂದು** ವಿಷಯಕ್ಕೆ ಟಿಪ್ಪಣಿ ಬರೆಯಿರಿ : **(1 × 4 = 4)**

1. ಕ್ಷೇತ್ರ ಕಾರ್ಯ
2. ಸಂಶೋಧನಾ ಸಮಸ್ಯೆ

II. **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಸಂಶೋಧಕನಿಗೆ ಇರಬೇಕಾಗಿರುವ ಅರ್ಹತೆಗಳು ಯಾವುವು? ವಿವರಿಸಿ.
2. ಸಂಶೋಧನೆಯ ತಾತ್ವಿಕ ನೆಲೆಗಳು ಮತ್ತು ಧೋರಣೆಗಳನ್ನು ಕುರಿತು ಡಾ. ಬಂಜಗೆರೆ ಜಯಪ್ರಕಾಶರ ಅಭಿಪ್ರಾಯವೇನು? ಚರ್ಚಿಸಿ.
3. ಕನ್ನಡ ಸಂಶೋಧನೆಯ ಇತಿಹಾಸ ಕುರಿತು ಕಲಬುರ್ಗಿ ಅವರ ಚಿಂತನೆಗಳನ್ನು ವಿಶ್ಲೇಷಿಸಿ.

ಭಾಗ–೨ : ಬಹುಶಿಸ್ತೀಯ ಅಧ್ಯಯನ

III. (ಅ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 5 = 10)**

1. 'ಭಾಷಾಂತರ' – ಪದ ನಿಷ್ಪತ್ತಿ
2. ಸಾಹಿತ್ಯ ಪರಂಪರೆ
3. ಡಾ. ಪ್ರಧಾನ್ ಗುರುದತ್

(ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ಭಾಷಾಂತರವೆಂದರೇನು? ವಿದ್ವಾಂಸರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ.
2. ಭಾಷಾಂತರದ ಅಗತ್ಯ ಮತ್ತು ಪ್ರಯೋಜನಗಳೇನು? ವಿವರಿಸಿ.
3. ಭಾಷಾಂತರದ ಸಾಹಿತ್ಯಕ ಮತ್ತು ಸಾಹಿತ್ಯೇತರ ಪ್ರವೃತ್ತಿಗಳು ಯಾವುವು? ವಿವರಿಸಿ.

IV. (ಅ) ಒಂದಕ್ಕೆ ಟಿಪ್ಪಣಿ ಬರೆಯಿರಿ : **(1 × 5 = 5)**

1. ಎಲಿಯಟ್‌ನ ಪರಂಪರೆ
2. ಸಾಹಿತ್ಯಕ ಪ್ರವೃತ್ತಿಗಳು
3. ಡಾ. ಎಸ್.ಎಸ್. ತಾರಾನಾಥ್

(ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ತೌಲನಿಕ ಸಾಹಿತ್ಯದ ಸ್ವರೂಪವನ್ನು ವಿಶದಪಡಿಸಿ.
2. ತೌಲನಿಕ ಸಾಹಿತ್ಯದ ಅಧ್ಯಯನ ವಿಧಾನಗಳು ಯಾವುವು? ತಿಳಿಸಿ.
3. ಸಾಹಿತ್ಯ ಮತ್ತು ರಾಜಕೀಯದ ನಡುವಿನ ಸಂಬಂಧವನ್ನು ಕುರಿತು ಬರೆಯಿರಿ.

ಭಾಗ–೩ : ಜಾನಪದ ಸ್ವರೂಪ

V. (ಅ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(2 × 5 = 10)**

1. ಸಂಪ್ರದಾಯಗಳು
2. ಗರತಿಯ ಹಾಡು
3. ಹಾ.ಮಾ.ನಾ.

(ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ಜನಪದ ಸಾಹಿತ್ಯ ಸ್ವರೂಪದ ಬಗ್ಗೆ ಹಾ.ಮಾ.ನಾ. ಅವರ ಅಭಿಪ್ರಾಯಗಳೇನು? ವಿವರಿಸಿ.
2. ಜಾನಪದ ಅಧ್ಯಯನವನ್ನು ವೈಜ್ಞಾನಿಕ ದೃಷ್ಟಿಕೋನದಲ್ಲಿ ನೋಡುವ ಬಗೆ ಹೇಗೆ? ವಿಶ್ಲೇಷಿಸಿ.
3. ಜನಪದ ಕಲೆಗಳ ಮಹತ್ವವೇನು? ವಿವರಿಸಿ.

---